ಶ್ರೀ ಆರ್. ನಾರಾಯಣಸ್ವಾಮಿಯವರನ್ನು, ಕಳೆದ ಪಕ್ಷ ರಾಯಚೂರಿನ ಸರ್ಕಾರಿ ಪಾಲಿಟೆಕ್ನಿಕ್‌ಗೆ ವರ್ಗಾಯಿಸಲಾಗಿದ್ದು. ಅವರು ಅಲ್ಲಿ ಕೆಲಸಕ್ಕೆ ಹಾಜರಾಗಿ ಅನಂತರ ಬಹಳ ದಿನಗಳಿಂದ ಅನಧಿಕೃತವಾಗಿ ಗೈರುಹಾಜರಿಯಾಗಿ, ಪಾಠಪ್ರವಚನ ಸರಿಯಾಗಿ ಮಾಡದೇ ಇರುವ ವಿಷಯದ ಬಗ್ಗೆ ಸಂಬಂಧಿಸಿದ ಪ್ರಾಂಶುಪಾಲರಿಂದ ವರದಿ ಪಡೆದು, ಸೂಕ್ತ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

ಇವರು ಶಾಸಕರ ಭವನದಲ್ಲಿ ಸದಾ ಅಲೆದಾಡುತ್ತಿದ್ದು ಮತ್ತು ರಾಜಕೀಯ ಮಾಡುತ್ತಿರುವ ವಿಷಯದ ಬಗ್ಗೆ ಸರ್ಕಾರಕ್ಕೆ ಖಚಿತ ಮಾಹಿತಿ ಇರುವುದಿಲ್ಲ. ಈ ಬಗ್ಗೆ ಖಚಿತ ಮಾಹಿತಿ ದೊರೆತರೆ, ಆ ಬಗ್ಗೆ ಕಾನೂನು ರೀತ್ಯ ಅವರ ಮೇಲೆ ಸೂಕ್ತ ಶಿಸ್ತಿನ ಕ್ರಮಕೈಗೊಳ್ಳಲಾಗುವುದು.

ಮೂಡಿಗೆರೆ ಜೂನಿಯರ್ ಕಾಲೇಜಿನಲ್ಲಿ ಹೆಚ್ಚಿನ ತರಗತಿಗಳನ್ನು ಮಂಜೂರು ಮಾಡುವ ಬಗ್ಗೆ

ಶ್ರೀಮತಿ ಮೋಟಮ್ಮ.—ಮಾನ್ಯ ಉಪಾಧ್ಯಕ್ಷರೇ, ಮೂಡಿಗೆರೆ ತಾಲ್ಲೂಕಿನಲ್ಲಿ ಕೇವಲ ೩ ಜೂನಿಯರ್ ಕಾಲೇಜುಗಳಿದ್ದು ೮ ಹೈಸ್ಕೂಲುಗಳಿರುತ್ತವೆ. ಈ ಸಾರಿ ಎಸ್‌ಎಸ್‌ಎಲ್‌ಸಿಯಲ್ಲಿ ಬಹಳ ವಿದ್ಯಾರ್ಥಿಗಳು ಪಿ.ಟ್ಗಾಗಿ ಪರದಾಡುತ್ತಿರುವುದು ಬಹಳ ಶೋಚನೀಯ ಸಂಗತಿಯಾಗಿದೆ. ವಿದ್ಯಾ ವಮಂತ್ರಿಗಳು ತಮ್ಮ ಇಲಾಖೆ ಬೇಡಿಕೆಗೆ ಉತ್ತರಿಸುತ್ತಾ, ಹೆಚ್ಚುವರಿ ತರಗತಿಗಳನ್ನು ನಡೆಸಲು ಅವಕಾಶ ಮಾಡಿಕೊಡುವುದಾಗಿ ಹೇಳಿರುತ್ತಾರೆ. ಆದರೆ ಇದುವರೆಗೂ ಯಾವುದೇ ಜೂನಿಯರ್ ಕಾಲೇಜಿಗೆ ಆದೇಶ ತಲುಪಿಲ್ಲ. ದಯಮಾಡಿ ಕೂಡಲೇ ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ವಿದ್ಯಾ ಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಉಪಾಧ್ಯಕ್ಷರೇ ನಾನು ಈಗಾಗಲೇ ಆದೇಶ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಅಲ್ಲಿ ಕಾರ್ಯಕ್ರಮ ತೆಗೆದುಕೊಳ್ಳದೇ ಹೋಗಿದ್ದರೆ ಅದನ್ನು ಜಾಗ್ರತೆ ಮಾಡಿಸುತ್ತೇನೆ.

ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನಲ್ಲಿ ನೇಕಾರರಿಗೆ ವಸತಿಗೃಹ ಮತ್ತು ವರ್ಕ್‌ಶೆಡ್ ಕಟ್ಟುವ ಬಗ್ಗೆ

ಶ್ರೀ ಶಿವಾನಂದ ಪೆಚ್. ಕೌಜಲಗಿ.—ಮಾನ್ಯ ಉಪಾಧ್ಯಕ್ಷರೇ ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ಪೈಕಿ ಪಕ್ಕಂದ ಗ್ರಾಮದಲ್ಲಿ ನೇಕಾರರಿಗೆ ವಸತಿ ಗೃಹ ಮತ್ತು 'ವರ್ಕ್‌ಶೆಡ್' ಕಟ್ಟುವ ಬೇಡಿಕೆ ಬಹಳ ದಿನಗಳಿಂದ ಇದೆ. ಈ ಬಗ್ಗೆ ಪುಲಪ್ರಭಾ ಯೋಜನೆಯವರು ೪ ಎಕರೆ ಜಮೀನನ್ನು ಪುಕ್ಕಟೆಯಾಗಿ ಈಗಾಗಲೇ ಸರ್ಕಾರಕ್ಕೆ ಕೊಟ್ಟಿದ್ದಾರೆ. ಹಿಂದಿನ ಮುಖ್ಯ ಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರು ಸಹ ಅಲ್ಲಿಗೆ ಬಂದಾಗ ಇಲ್ಲಿ ನೇಕಾರರಿಗೆ ಮನೆಗಳನ್ನು ಮತ್ತು 'ವರ್ಕ್‌ಶೆಡ್' ಕಟ್ಟುವ ಸಲುವಾಗಿ ಆಶ್ವಾಸನೆ ಕೊಟ್ಟಿದ್ದರು. ಆದಕಾರಣ ಇಲ್ಲಿ ಇವುಗಳನ್ನು ಕಟ್ಟಿಸಿಕೊಡುವ ಬಗ್ಗೆ ತಮ್ಮ ಮುಖಾಂತರ ಮಾನ್ಯ ಉದ್ದಿಮೆ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀಮತಿ ಸರೋಜಾ ವಸಂತ (ಕೈಗಾರಿಕಾ ರಾಜ್ಯ ಸಚಿವರು).—ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು, ಬೆಳಗಾಂ ಜಿಲ್ಲೆಯ ಬೈಲಹೊಂಗಲದಲ್ಲಿ ತನ್ನ ಉತ್ಪಾದನ ಕೇಂದ್ರವನ್ನು ಹೊಂದಿದ್ದು, ಒಕ್ಕಂದ ಗ್ರಾಮದಲ್ಲಿನ ನೇಕಾರರೂ ಸೇರಿದಂತೆ ಈ ಕೇಂದ್ರದಲ್ಲಿ ೧೨೦ ಮಗ್ಗಗಳನ್ನು ಆಳವಡಿಸಿಕೊಳ್ಳಲಾಗಿದೆ. ಒಕ್ಕುಂದ ಗ್ರಾಮವೂ ಬೈಲಹೊಂಗಲದಿಂದ ೧೫ ಕಿ.ಮೀ. ದೂರದಲ್ಲಿದ್ದು ಈ ಗ್ರಾಮದಲ್ಲಿ ನಿಗಮವು ೫೦ ಮಗ್ಗಗಳನ್ನು ಆಳವಡಿಸಿಕೊಂಡಿದೆ. ಈ ಗ್ರಾಮದ ನೇಕಾರರೂ ಬೈಲಹೊಂಗಲ ಉಪಕೇಂದ್ರದಿಂದ ನೂಲು ಮತ್ತು ಇತರೆ ಕಚ್ಚಾ ಪದಾರ್ಥಗಳನ್ನು ಪಡೆದು ನೆಯ್ದ ಬಟ್ಟೆಯನ್ನು ಬೈಲಹೊಂಗಲ ಉಪಕೇಂದ್ರಕ್ಕೆ ಹಿಂತಿರುಗಿಸುತ್ತಾರೆ.

ಡಚ್ ನೆರವಿನ ''ಕರ್ನಾಟಕ ಇಂಡಸ್ಟ್ರೀಯಲ್ ಷೆಡ್ಸ್ ಯೋಜನೆ''ಯು ಮೊದಲನೇ ಹಂತದಲ್ಲಿ ನಿಗಮವು ಕೈಮಗ್ಗ ನೇಕಾರರಿಗೆ ರಾಜ್ಯದಲ್ಲಿನ ೨೫ ಸ್ಥಳಗಳಲ್ಲಿ ೧೯೪೨ ವಸತಿ ಹಾಗೂ ಕಾರ್ಯಗಾರಗಳನ್ನು ಒದಗಿಸಿದೆ. ಮೊದಲನೇ ಹಂತದ ಯೋಜನೆಯನ್ನು ೧೯೮೭ರಲ್ಲಿ ಪೂರ್ಣಗೊಳಿಸಲಾಯಿತು. ಮೊದಲನೇ